# ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ನಡವಳಿಗಳು

ವಿಷಯ: ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯಲಿರುವ ಲೈಂಗಿಕ ಕಿರುಕುಳ ತಡೆಯಲು ದೂರು ನಿವಾರಣಾ ಸಮಿತಿಯನ್ನು ರಚಿಸುವ ಬಗ್ಗೆ

ಉಲ್ಲೇಖ: 1. ಸರ್ಕಾರದ ಆದೇಶ ಸಂ: ಮಮಇ 58 ರಾಮಅ 2002, ದಿ: 28-02-2002
2. ಸರ್ಕಾರದ ಆದೇಶ ಸಂ: ಮಇ 212 ಮಮಅ 2002, ದಿ: 24-01-2003
3. ಸರ್ಕಾರದ ಪತ್ರ ಸಂ: ಇಡಿ 90 ಎಸ್‌ಟಿಬಿ 2006, ದಿ: 28-04-2009.
4. ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಆದೇಶ ಸಂಖ್ಯೆ: ಡಿಟಿಇ 294 ಇಎಸ್‌ಟಿ(7) 2014 ದಿನಾಂಕ: 13-07-2015
5. ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ರವರ ಪತ್ರ ಸಂ:ಸಿಬ್ಬಂದಿ/25/ನಾಹಜಾನಿ/2012, ದಿ: 4/08/2015
6. ಅಧ್ಯಕ್ಷರು, ಭಾರತೀಯ ಸಾಮಾಜಿಕ ಸ್ವಾಸ್ಥ್ಯ ಸಂಘ, ಬೆಂಗಳೂರು ಇವರ ಪತ್ರದ ದಿನಾಂಕ:06-10-2015

ಪ್ರಸ್ತಾವನೆ:

ಓದಲಾದ ಉಲ್ಲೇಖ(1) ಹಾಗೂ (3)ವರೆಗಿನ ಸರ್ಕಾರದ ಆದೇಶಗಳನ್ವಯ ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯಲಿರುವ ಲೈಂಗಿಕ ಕಿರುಕುಳ ತಡೆಯಲು ಉಲ್ಲೇಖ(4)ರಲ್ಲಿ ದೂರು ನಿವಾರಣಾ ಸಮಿತಿಗೆ ಪೊಲೀಸ್ ಇಲಾಖೆಯ ಅಧಿಕಾರಿಯೊಬ್ಬರನ್ನು ಹಾಗೂ ಸರ್ಕಾರೇತರ ಸಂಸ್ಥೆಯಿಂದ ಪ್ರತಿನಿಧಿಯೊಬ್ಬರನ್ನು ಸದಸ್ಯರುಗಳನ್ನಾಗಿ ನೇಮಕ ಮಾಡಬೇಕಾಗಿಯತ್ತದೆ.

ಉಲ್ಲೇಖ(5)ರ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ರವರ ಪತ್ರ ದಿ: 14/08/2015 ರಲ್ಲಿ ಪೊಲೀಸ್ ಇಲಾಖೆಯ ಮಹಿಳಾ ಅಧಿಕಾರಿಯವರ ನೇಮಕ ಮಾಡುವ ಸಂಬಂಧ ಶ್ರೀ ಪಿ.ಎಸ್. ಸೀಮಾ, ಮಹಿಳಾ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ಪ್ರಾದೇಶಿಕ ಕಛೇರಿ, ಕಾವೇರಿ ಭವನ ಎಫ್ ಬ್ಲಾಕ್, 2ನೇ ಮಹಡಿ, ಬೆಂಗಳೂರು ಇವರ ಹೆಸರನ್ನು ಸೂಚಿಸಿರುತ್ತಾರೆ.

ಉಲ್ಲೇಖ(6)ರ ಅಧ್ಯಕ್ಷರು, ಭಾರತೀಯ ಸಾಮಾಜಿಕ ಸ್ವಾಸ್ಥ್ಯ ಸಂಘ, ಬೆಂಗಳೂರು ಇವರ ಪತ್ರ ದಿನಾಂಕ: 06-10-2015 ರಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿಯಾದ ಶ್ರೀಮತಿ ಸುಮಿತ್ರಾ ರಾಮಚಂದ್ರ, ಭಾರತೀಯ ಸಾಮಾಜಿಕ ಸ್ವಾಸ್ಥ್ಯ ಸಂಘ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇವರ ಹೆಸರನ್ನು ಸದರಿ ಸಮಿತಿಯ ಖಾಲಿಯಿರುವ ಸದಸ್ಯ ಸ್ಥಾನಕ್ಕೆ ಸೂಚಿಸಿರುತ್ತಾರೆ.

ಅದರಂತೆ ಸದರಿ ದೂರು ನಿವಾರಣಾ ಸಂಸ್ಥೆಗೆ ಮತ್ತಿಬ್ಬರು ಸದಸ್ಯರನ್ನು ಸೇರ್ಪಡೆಗೊಳಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಡಿಟಿಇ 294 ಇಎಸ್‌ಟಿ(7) 2014, ದಿನಾಂಕ: 19-11-2015 /4635

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರದ ಆದೇಶಗಳನ್ವಯ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುವ ಸ್ಥಳಗಳಲ್ಲಿ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯಲಿರುವ ಲೈಂಗಿಕ ಕಿರುಕುಳ ತಡೆಯಲು ಉಲ್ಲೇಖ(4) ರಲ್ಲಿ ಈಗಾಗಲೇ ರಚಿಸಲಾಗಿರುವ ದೂರು ನಿವಾರಣಾ ಸಮಿತಿಗೆ ಈ ಕೆಳಕಂಡ ವಿವರದಂತೆ ಪೊಲೀಸ್ ಇಲಾಖೆಯ ಅಧಿಕಾರಿಯೊಬ್ಬರನ್ನು ಹಾಗೂ ಸರ್ಕಾರೇತರ ಸಂಸ್ಥೆಯಿಂದ ಪ್ರತಿನಿಧಿಯೊಬ್ಬರನ್ನು ಸದಸ್ಯರುಗಳನ್ನಾಗಿ ನೇಮಕ ಮಾಡಿ ಸೇರ್ಪಡೆಗೊಳಿಸಿ ಆದೇಶಿಸಲಾಗಿದೆ.

1. ಶ್ರೀಮತಿ ಪಿ.ಎಸ್. ಸೀಮಾ, ಮಹಿಳಾ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು

........2

2. ಶ್ರೀಮತಿ ಸುಮಿತ್ರಾ ರಾಮಚಂದ್ರ, ಗೌರವ ಕಾರ್ಯದರ್ಶಿ, ಭಾರತೀಯ ಸಾಮಾಜಿಕ ಸ್ವಾಸ್ಥ್ಯ ಸಂಘ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು.

ಕರಡು ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.

ನಿರ್ದೇಶಕರು

ಇವರಿಗೆ,

1. ಶ್ರೀಮತಿ ವಿ.ಎಸ್. ಸೀಮಾ, ಮಹಿಳಾ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು, ಪ್ರಾದೇಶಿಕ ಕಛೇರಿ ಕಾವೇರಿ ಭವನ ಎಫ್ ಬ್ಲಾಕ್ 2ನೇ ಮಹಡಿ, ಬೆಂಗಳೂರು
2. ಶ್ರೀಮತಿ ಸುಮಿತ್ರಾ ರಾಮಚಂದ್ರ, ಗೌರವ ಕಾರ್ಯದರ್ಶಿ, ಭಾರತೀಯ ಸಾಮಾಜಿಕ ಸ್ವಾಸ್ಥ್ಯ ಸಂಘ, ಕರ್ನಾಟಕ ರಾಜ್ಯ ಶಾಖೆ, ಅಭಯಾಶ್ರಮ 4ನೇ ಕ್ರಾಸ್ ವಿಲ್ಸನ್ ಗಾರ್ಡನ್ , ಬೆಂಗಳೂರು –560027

ಪ್ರತಿ ಮಾಹಿತಿಗಾಗಿ:

1. ದೂರು ನಿವಾರಣಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ
2. ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ, ಬೆಂಗಳೂರು ಇವರಿಗೆ.
3. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು ಇವರಿಗೆ
4. ಸರ್ಕಾರದ ಅಧೀನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಇವರಿಗೆ
5. ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ(ಸಾಮಾನ್ಯ) ಬೆಂಗಳೂರು ಇವರಿಗೆ
6. ಅಡಿಷನಲ್ ಡೈರೆಕ್ಟರ್ ಜನರಲ್ ಪೊಲೀಸ್ , ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಅರಮನೆ ರಸ್ತೆ ಬೆಂಗಳೂರು –01
7. ಅಧ್ಯಕ್ಷರು, ಭಾರತೀಯ ಸಾಮಾಜಿಕ ಸ್ವಾಸ್ಥ್ಯ ಸಂಘ, ಕರ್ನಾಟಕ ರಾಜ್ಯ ಶಾಖೆ, ಅಭಯಾಶ್ರಮ 4ನೇ ಕ್ರಾಸ್, ವಿಲ್ಸನ್ ಗಾರ್ಡನ್ , ಬೆಂಗಳೂರು –560027
8. ತಾಂತ್ರಿಕ ಶಿಕ್ಷಣ ಇಲಾಖೆಗೆ ಒಳಪಡುವ ಎಲ್ಲಾ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜ್/ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆ ಪ್ರಿನ್ಸಿಪಾಲರುಗಳಿಗೆ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
9. ಇ-ಆಡಳಿತ ಘಟಕಕ್ಕೆ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.